## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 15-10-2022

### ಚಿಟಗುಪ್ಪಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 122/2022 ಕಲಂ 78(3) ಕೆ,ಪಿ, ಎಕ್ಟ್ :-

ದಿನಾಂಕ:14/10/2022 ಮಧ್ಯಾಹ್ನ 1815 ಗಂಟೆಗೆ ಪಿಎಸ್ಐ ರವರಿಗೆ ಖಚಿತ ಬಾತ್ಮಿ ಬಂದಿದ್ದೆನೆಂದರೆ, ಮುಸ್ತರಿ ಗ್ರಾಮದ ಬಸವೇಶ್ವರ ಚೌಕ ಹತ್ತಿರ ಒಬ್ಬ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಕರೆದು ಅವರಿಗೆ ಒಂದು ರೂಪಾಯಿ ನೀಡಿರಿ ಮಟಕದ ನಂಬರ ಹತ್ತಿದರೆ ಒಂದು ರೂಪಾಯಿಗೆ 80 ರೂ ನೀಡುತ್ತೇನೆ ಅಂತ ಹೇಳಿ ಸಾರ್ವಜನಿಕರಿಂದ ಹಣ ಪಡೆದು ಅವರಿಗೆ ಮಟಕಾ ಚೀಟಿ ಬರೆದುಕೋಡುತ್ತಿದಾನೆ ಅಂತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಮುಸ್ತರಿ ಗ್ರಾಮದ ಬಸವೇಶ್ವರ ಚೌಕ ಹತ್ತಿರ ದೂರಿನಿಂದ ಮರೆಯಾಗಿ ನಿಂತು ನೋಡಿ ಒಬ್ಬ ವ್ಯಕ್ತಿ ಮಟಕಾ ಚಿಟಿ ಬರೆದುಕೊಡುವುದನ್ನು ನೋಡಿ ಖಚಿತ ಮಾಡಿಕೊಂಡು ಅವನ ಮೇಲೆ 1845 ಗಂಟೆಗೆ ದಾಳಿ ಮಾಡಿ ಹಿಡಿದು ವಿಚಾರಿಸಲು ಅವನು ತನ್ನ ಹೆಸರು ಶಿವಕುಮಾರ ತಂದೆ ವೀರಶೆಟ್ಟಿ ರಟಕಲ, ವಯ:28 ವರ್ಷ ಜಾತಿ:ಲಿಂಗಾಯತ, ಉ:ಒಕ್ಕಲುತನ ಕೆಲಸ, ಸಾ:ಮುಸ್ತರಿ ಅಂತ ತಿಳಿಸಿದನು. ನಂತರ ಇವನ ಅಂಗ ಶೋಧನೆ ಮಾಡಲು ಕಿಸೆಯಿಂದ ಒಂದು ಬಾಲ ಪೇನ ಹಾಗು 5 ನಂಬರ ಬರೆದ ಮಟಕಾ ಚೀಟಗಳು ಹಾಗು ನಗದು 3200/- ರೂಪಾಯಿ ಹಾಗು ಎಮ್.ಐ. ಮೊಬೈಲ ಅಂ.ಕಿ. ರೂ.10000/- ರೂಪಾಯಿವುಳದ್ದು ಇದ್ದು. ಶಿವಕುಮಾರನು ಸಾರ್ವಜನಿಕರಿಗೆ ಕರೆದು ಮಟಕಾ ಚೀಟಿ ಬರೆದುಕೊಟ್ಟು ಒಂದು ರೂಪಾಯಿ ನೀಡಿರಿ ಮಟಕದ ನಂಬರ ಹತ್ತಿದರೆ ಒಂದು ರೂಪಾಯಿಗೆ 80 ರೂ, ನೀಡುತ್ತೇನೆ ಅಂತ ಹೇಳಿ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದುಕೊಡುತ್ತಿದ್ದು ಇರುತ್ತದೆ. ಅವನಿಂದ 5 ನಂಬರ ಬರೆದ ಮಟಕಾ ಚೀಟಗಳು, ಒಂದು ಬಾಲ ಪೇನ ಮತ್ತು ನಗದು 3200/-ರೂಪಾಯಿ ಹಾಗು ಎಮ್.ಐ. ಮೊಬೈಲ ಅಂ.ಕಿ. ರೂ.10000/- ರೂಪಾಯಿವುಳದ್ದು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 143/2022 ಕಲಂ 279,337, 304(ಎ) ಐ.ಪಿ.ಸಿ :-

ದಿನಾಂಕ: 14/10/2022 ರಂದು ರಾತ್ರಿ 0215 ಗಂಟೆಗೆ ಭಾಲ್ಕಿ ಸರಕಾರಿ ಆಸ್ಪತ್ರೆಯಲ್ಲಿ ರಸ್ತೆ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಗಾಯಾಳು ಮುರುಳಿ ಕೃಷ್ಣ ತಂದೆ ಪೊಲ್ಲಯ್ಯಾ ಬಂಜಲ್ಲಾ ವಯ;46 ವರ್ಷ ಜಾ;ನಾಯ್ಡು ಉ;ಚಾಲಕ ಸಾ;ಕಂಚಿಕಾ ಚಾರ್ಲು ತಾ;ನಂದಿಗಾಂವ ಜಿ;ಕೃಷ್ಣ (ಆಂಧ್ರ ಪ್ರದೇಶ) ರವರಿಗೆ ವಿಚಾರಿಸಿದಾಗ ಅವರು ನೀಡಿದ ಮೌಖಿಕ ದೂರಿನ ಸಾರಾಂಶವೆನೆಂದ್ದರೆ, ಇವರು ಲಾರಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದು ಲಾರಿ ನಂ;ಎಪಿ-39 ಯು-2266 ನೇದ್ದರ ಮೇಲೆ ಚಾಲಕನಾಗಿ ಎಮ್. ವಿಜಯಕುಮಾರ ತಂದೆ ಸಮಸ್ತೇನರಾಜು ಮಳಪಳ್ಳಿ, ಚವಟಿಕಲ್ಲು ಮಂಡಲ್ ಕಂಚಿಕಾ ಚಾರ್ಲು ಜಿ:ಕೃಷ್ಣ ಈತನು ಚಾಲಕನಾಗಿ ನನ್ನ ಜೊತೆಯಲ್ಲಿ ಇರುತ್ತಾನೆ. ಇವರಿಬ್ಬರು ಒಬ್ಬರಾದ ಮೇಲೆ ಒಬ್ಬರು ಪಾಳಯ ಪ್ರಕಾರ ಲಾರಿ ಚಲಾಯಿಸಿಕೊಂಡು ಹೀಗಿದ್ದು, ದಿನಾಂಕ;10/10/2022 ರಂದು ಬೆಳಿಗ್ಗೆ ಗುಜರಾತಿನ ಮೊರ್ಭಿಯಿಂದ ಲಾರಿಯಲ್ಲಿ ಟೈಲ್ಸ ತುಂಬಿಸಿಕೊಂಡು ಆಂಧ್ರಪ್ರದೇಶದ ನರ್ಸಿಪಟ್ಟಣಂ ಕಡೆಗೆ ಹೊರಟಿದ್ದು ದಿನಾಂಕ;14/10/2022 ರಂದು ರಾತ್ರಿ 1230 ಗಂಟೆಗೆ ಆಂಧ್ರದ ನರ್ಶಿಪಟ್ಟಣದ ಕಡೆಗೆ ಹೋಗುವಾಗ ಬೀದರ್ ಉದಗೀರ ರೋಡ್ ಅಂಬೇಸಾಂಗವಿ ಕ್ರಾಸ್ ಹತ್ತಿರ ಪ್ಲೈ ಒವರ್ ಮೇಲೆ ಹೋಗುವಾಗ ವಿಜಯಕುಮಾರ ಈತನು ಲಾರಿ ನಂ ಎಪಿ-39 ಯು-2266 ನೇದ್ದನ್ನು ಚಲಾಯಿಸಿಕೊಂಡು ಹೋಗುತ್ತಿದ್ದು, ಫಿರ್ಯಾದಿಯು ಒಳಗಡೆ ಇರುತ್ತಾರೆ ಆ ಸಮಯಕ್ಕೆ ಎದುರಿನಿಂದ ಅಂದರೆ ಬೀದರ್ ಕಡೆಯಿಂದ ಒಂದು ಕಂಟೇನರ್ ನೇದ್ದರ ಚಾಲಕ ತಾನು ಚಲಾಯಿಸಿರುವ ಕಂಟೇನರ್ ಅನ್ನು ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಮಾನವ ಜೀವಕ್ಕೆ ಅಪಾಯಕರವಾದ ರೀತಿಯಲ್ಲಿ ಚಲಾಯಿಸಿಕೊಂಡು ಬಂದು, ಲಾರಿಗೆ ಎದುರಿನಿಂದ ಜೋರಾಗಿ ಡಿಕ್ಕಿ ಮಾಡಿರುತ್ತಾನೆ. ಡಿಕ್ಕಿ ಪರಿಣಾಮವಾಗಿ ಲಾರಿ ಚಾಲಕ ವಿಜಯಕುಮಾರ ಹಾಗೂ ಕಂಟೇನರ ಚಾಲಕ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಫಿರ್ಯಾದಿಗೆ ಸದರಿ ಡಿಕ್ಕಿಯಿಂದ ಎಡಗೈಗೆ ಬೆನ್ನಿನಲ್ಲಿ ಗುಪ್ತಗಾಯ ಆಗಿದ್ದು ಇರುತ್ತದೆ. ನಂತರ ಕಂಟೇನರ ನಂಬರ್ ನೋಡಲು ಎಮ್.ಹೆಚ್ 20 ಡಿಇ 2243 ನೇದ್ದು ಇರುತ್ತದೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.